ಸೆಲೆಬ್ರಿಟಿ

■ ಹನಿ

## ದಿ ಲಾಸ್ಟ್ ಷೋ!



'ಬದುಕಿರುವಾಗಲೇ ದಂತಕಥೆ' ಎನ್ನುವ ವಾಕ್ಯ ಓಪ್ರಾ ವಿನ್‌ಫ್ರೀಗೆ ಅಂದವಾಗಿ ಒಪ್ಪುತ್ತದೆ. ಜಗತ್ತಿನ ಟಿವಿ ವಾಹಿನಿಗಳಲ್ಲೇ ಅತ್ಯಂತ ಜನಪ್ರಿಯ ಎನ್ನಬಹುದಾದ, 'ಓಪ್ರಾ ವಿನ್ ಫ್ರೀ ಟಾಕ್ ಷೋ'ದ ನಿರೂಪಕಿ ಓಪ್ರಾ ಇದೀಗ ನಿರಂತರ 25 ವರ್ಷಗಳಿಂದ ನಡೆದುಬಂದ ಟಾಕ್‌ಷೋಗೆ ಮುಕ್ತಾಯ ಹಾಡಿದ್ದಾಳೆ. ಆಕೆ ತನ್ನ ಟಿವಿ ಟಾಕ್‌ಷೋ ಅನ್ನು ಆರಂಭಿಸಿದ್ದು 1986ರಲ್ಲಿ. ಜಗತ್ತಿನ ಬಹುದೊಡ್ಡ ತಾರೆಯರೆಲ್ಲ ಈ ಟಾಕ್‌ಷೋನಲ್ಲಿ ಬಂದು ಕುಳಿತು ಮಾತುಕತೆಯಾಡಿ ಹೋಗಿದ್ದಾರೆ. ಸತತ 25 ವರ್ಷಗಳ ಕಾಲ ನಡೆದ ಟಿವಿ ಟಾಕ್‌ಷೋ ಜಗತ್ತಿನಲ್ಲಿ ಇನ್ನೊಂದಿಲ್ಲ. ಟಿವಿ ಬರುವುದಕ್ಕೆ ಮುನ್ನವೇ ತನ್ನ ಟಾಕ್‌ಷೋ ಶುರು ಮಾಡಿದ್ದ ವಿನ್‌ಫ್ರೀ, ಟಾಕ್‌ಷೋ ಮೂಲಕ ರೇಡಿಯೋದಲ್ಲಿ ಜನಪ್ರಿಯಳಾಗಿದ್ದಳು. ಸಂದರ್ಶನಕ್ಕೆ ಬಂದ ಅತಿಥಿಗಳನ್ನು ಮಾತಿನ ಮೂಲಕವೇ ಕಟ್ಟಿಹಾಕಿ, ಅವರ ಬದುಕಿನ ಎಲ್ಲ ಎಳೆಗಳನ್ನೂ ಬಿಡಿಸಿ, ಅಳಿಸಿ, ನಗಿಸಿ– ವೀಕ್ಷಕರಿಗೆ ಹೊಸ ಲೋಕವೊಂದನ್ನೇ ತೋರಿಸುತ್ತಿದ್ದ ಮಾಟಗಾತಿ ಓಪ್ರಾ! (ಬರ್ತ್‌ಡೇ 29–1–1954).

ಓಪ್ರಾ ಬಾಲ್ಯ ಮಾತ್ರ ದಯನೀಯವಾಗಿತ್ತು. ಅಮೆರಿಕದ ಮಿಸ್ಸಿಸ್ಸಿಪಿ ಹೊರವಲಯದಲ್ಲಿ 'ಸಿಂಗಲ್ ಮದರ್'ಗೆ ಜನಿಸಿದ ಓಪ್ರಾ ತನ್ನ 9ರ ಎಳವೆಯಲ್ಲೇ ಅತ್ಯಾಚಾರಕ್ಕೆ ಒಳಗಾದವಳು. 14ರ ವಯಸ್ಸಿನಲ್ಲಿ ತಾಯಿಯಾಗಿ, ಆ ಮಗುವನ್ನೂ ಎಳೆಯದರಲ್ಲೇ ಕಳೆದುಕೊಂಡವಳು! ಬಾಲ್ಯದ ಎಲ್ಲ ದುಸ್ವಪ್ನಗಳನ್ನೂ ಮೀರಿ, ತನ್ನ ಮಾತುಗಳ ಮೂಲಕವೇ ಬೆಳೆದು ನಿಂತವಳು. ಹೈಸ್ಕೂಲ್ ಓದುವಾಗಲೇ ರೇಡಿಯೋದಲ್ಲಿ ಕಾರ್ಯಕ್ರಮ ನಡೆಸತೊಡಗಿದ ಓಪ್ರಾ, 19ರ ಹರೆಯದಲ್ಲಿ ರೇಡಿಯೋದಲ್ಲಿ ಸಹ–ಆ್ಯಂಕರ್ ಆಗಿ ದಾಖಲೆ ಬರೆದಳು. ಆ ಬಳಿಕ ಷಿಕಾಗೋ ಟಾಕ್‌ಷೋ ಮೂಲಕ ಸ್ಥಳೀಯವಾಗಿ ಪ್ರಸಿದ್ಧಿಗೆ ಬಂದಳು. ಸ್ವಂತ ಸಂಸ್ಥೆಯನ್ನು ಕಟ್ಟಿ, ಕ್ರಮೇಣ ಜಗತ್ಪ್ರಸಿದ್ಧಳಾದಳು. ಇವತ್ತು ಜಗತ್ತಿನ ಏಕೈಕ 'ಕರಿಯ ಬಿಲಿಯಾಧೀಶೆ' ಈಕೆ. 20ನೇ ಶತಮಾನದ ಅಮೆರಿಕದ 'ಅತ್ಯಂತ ಶ್ರೀಮಂತ ಆಫ್ರೋ ಅಮೆರಿಕನ್' ಎಂಬ ಬಿರುದೂ ಆಕೆಗಿದೆ. ಜಗತ್ತಿನ ಅತ್ಯಂತ ಪ್ರಭಾವಶಾಲಿ ಮಹಿಳೆಯರ ಪಟ್ಟಿಯಲ್ಲಿ ಆಕೆಯ ಹೆಸರು ಮುಂಚೂಣಿಯಲ್ಲಿದೆ. ಆಕೆಯ ಕಟ್ಟಕಡೆಯ ಟಾಕ್‌ಷೋ ನೋಡಲು ಜಗತ್ತಿನಾದ್ಯಂತ ಬಿಲಿಯಗಟ್ಟಳೆ ಜನ ಟಿವಿ ಮುಂದೆ ಕುಳಿತಿದ್ದರು.

'ಆರಂಭದಲ್ಲಿ ನಾನು ಅದನ್ನೊಂದು ಉದ್ಯೋಗ ಎಂದೇ ಭಾವಿಸಿದ್ದೆ. ಆದರೆ ಕ್ರಮೇಣ ನನ್ನ ಸಂದರ್ಶನಗಳು ನನ್ನನ್ನೂ ಮೀರಿ ಬೆಳೆಯತೊಡಗಿದವು. ಅತಿಥಿಗಳು ಮಾತನಾಡುವುದನ್ನು ಕೇಳಿಸಿಕೊಳ್ಳುತ್ತಲೇ ನಾನು ಬೆಳೆದೆ. ನನ್ನ ಜತೆಗೆ ವೀಕ್ಷಕರೂ ಬೆಳೆದರು' ಎಂದಿದ್ದಾಳೆ ವಿದಾಯದ ಷೋನಲ್ಲಿ ಈ ಕೃಷ್ಣಸುಂದರಿ!

## 'ಕ್ರೈಮ್' ವರ್ಮ್!

ಅಪರಾಧ ಜಗತ್ತಿನ ರೋಚಕ ಸಂಗತಿಗಳೆಂದರೆ ರಾಂ ಗೋಪಾಲ್ ವರ್ಮಾಗೆ ಪಂಚಪ್ರಾಣ. ಭೂಗತ ಜಗತ್ತಿನ ಪ್ರತಿಯೊಂದು ಎಳೆಯನ್ನೂ ಹಿಂಜಿ ಹಿಂಜಿ ಸಿನಿಮಾ ನಿರ್ಮಿಸುವ ವರ್ಮಾಗೆ ಇದರಿಂದ ಬೇಜಾರಾಗುವ ಸಂಭವವೇ ಇಲ್ಲವೆಂದು ಕಾಣುತ್ತದೆ. ಭೂಗತ ರೌಡಿಗಳ ಕಾದಾಟವನ್ನೇ ಸಿನಿಮಾ ಬಂಡವಾಳ ಮಾಡಿಕೊಂಡಿರುವ ವರ್ಮಾ, ಈ ಹಿನ್ನೆಲೆಯಲ್ಲೇ ಹಲವು ಸಲ ವಿವಾದಗಳಿಗೆ ಸಿಲುಕಿದ್ದಾರೆ. ಈಗ ಮತ್ತೊಮ್ಮೆ ಆತನ ಹೊಸ ಚಿತ್ರ 'ಬೇಜ್‌ವಾಡ ರೌಡಿಲು' ವಿವಾದದ ಕಿಡಿ ಹೊತ್ತಿಸಿದೆ.

ಬೇಜ್‌ವಾಡ ಅಂದರೆ ವಿಜಯವಾಡ. 90ರ ದಶಕದಲ್ಲಿ ಇಲ್ಲಿ ಹಾದಿಬೀದಿಗಳಲ್ಲಿ ನಡೆಯುತ್ತಿದ್ದ ಭಯಾನಕ ರೌಡಿ ಕಾಳಗಗಳು ರಾಜಕೀಯದಲ್ಲೂ ಪಲ್ಲಟಗಳನ್ನು ಉಂಟು ಮಾಡಿದ್ದವು. ವರ್ಮಾ ಈಗ ಆ ಹಳೆಯ ರೌಡಿ ಕಾಳಗಗಳನ್ನೇ ಇಟ್ಟುಕೊಂಡು ಸಿನಿಮಾ ಕಥೆ ಹೆಣೆದಿದ್ದಾರೆ. ಪೂರ್ವಜನ್ಮದ ಪಾಪಗಳನ್ನು ಮರೆತು ನೆಮ್ಮದಿಯಾಗಿರುವ ರೌಡಿ ಗುಂಪುಗಳ ನಾಯಕರು ಈ ಸಿನಿಮಾಕ್ಕೆ ಆಕ್ಷೇಪ ತೆಗೆದಿದ್ದಾರೆ. ಜತೆಗೆ 'ಸರ್ವೋದಯ' ಎಂಬ ಸಂಘಟನೆಯೂ 'ಈ ಸಿನಿಮಾ ವಿಜಯವಾಡ ನಗರದ ಬಗ್ಗೆ ಕೆಟ್ಟ ಪ್ರಚಾರ ನೀಡಲಿದೆ' ಎಂದು ತಡೆಯೊಡ್ಡಿದ್ದಾರೆ. ಕಳೆದ ವಾರ ಕನಕದುರ್ಗ ಟೆಂಪಲ್ ರಸ್ತೆಯಲ್ಲಿ ಹಾಡುಹಗಲೇ ಸಿನಿಮಾ ನಟರು ಮಚ್ಚು ಹಿಡಿದುಕೊಂಡು ಓಡುತ್ತಾ ಶೂಟಿಂಗ್ ನಡೆಸುತ್ತಿದ್ದರೆ ನೋಡಿದ ಜನ ಬೆಚ್ಚಿಬಿದ್ದಿದ್ದಾರೆ. ಪೊಲೀಸ್ ಸ್ಟೇಶನ್ ಮೆಟ್ಟಿಲು ಹತ್ತಿ ಶೂಟಿಂಗಿಗೆ ತಡೆ ಒಡ್ಡಿದ್ದಾರೆ. ಪೊಲೀಸರು 'ಚಿತ್ರಕಥೆ ಕೊಡಿ. ಓದಿದ ಬಳಿಕ, ಹಳೇ ರೌಡಿಗಳ ಜತೆ ಚರ್ಚಿಸಿದ ಬಳಿಕ ಶೂಟಿಂಗ್‌ಗೆ ಮರುಅನುಮತಿಯ ಮಾತು' ಎಂದಿದ್ದಾರೆ!



89ರಲ್ಲಿ 'ಶಿವಾ' ಎಂಬ ರೌಡಿ ಚಿತ್ರದ ಮೂಲಕ ಸಿನಿಮಾ ಪಯಣ ಆರಂಭಿಸಿದ ವರ್ಮಾ, ಮರುವರ್ಷ 'ಸತ್ಯಾ' ಎಂಬ ಚಿತ್ರಕ್ಕೆ ಆರು ಫಿಲಂಫೇರ್ ಪ್ರಶಸ್ತಿ ಬಾಚಿಕೊಂಡಾತ. 'ಫ್ಯಾಕ್ಟರಿ' ಎಂದೇ ಆತನ ನಿರ್ಮಾಣ ಸಂಸ್ಥೆಯ ಹೆಸರು. ಹೆಂಡತಿ ರತ್ನಾಳನ್ನು ಡೈವೋರ್ಸ್ ಮಾಡಿರುವ ವರ್ಮಾನ ಹೆಸರು ಹೀರೋಯಿನ್‌ಗಳ ಜತೆ ಹಲವು ಸಲ ಥಳುಕು ಹಾಕಿದ್ದಿದೆ. ಚಿತ್ರದ ಸೋಲಿನ ಬಗ್ಗೆ ಯಾವತ್ತೂ ತಲೆ ಕೆಡಿಸಿಕೊಳ್ಳದೆ ಮತ್ತೊಂದು ಚಿತ್ರ ಮಾಡುವುದು ವರ್ಮಾ ಸ್ಟೈಲ್! ಆದರೆ ಪದೇ ಪದೇ ರೌಡಿ ಚಿತ್ರಗಳನ್ನು ಮಾಡುವ ಈತನ ಚಾಳಿಗೆ ಏನನ್ನಬೇಕೊ ಗೊತ್ತಾಗುತ್ತಿಲ್ಲ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65